# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 221 (323) |
| ಸದಸ್ಯರ ಹೆಸರು | ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 15.02.2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಕೆ.ಸಿ.ಎಸ್.ಆರ್ ನಿಯಮಾವಳಿಗಳಂತೆ ಯಾವ ಯಾವ ದಾಖಲೆಗಳನ್ನು ಒದಗಿಸಬೇಕು; ಯಾರಿಂದ ಪಡೆದು ಒದಗಿಸಬೇಕು; ಎಷ್ಟು ಬಾರಿ ದಾಖಲೆಗಳನ್ನು ಒದಗಿಸಬೇಕು; (ಚೆಕ್ ಲಿಸ್ಟ್‌ನೊಂದಿಗೆ ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಮತ್ತು ಸದರಿ ನಿಯಮಗಳಿಗೆ ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಯಂತೆ ಸಂದರ್ಭಾನುಸಾರವಾಗಿ ಅನುಕಂಪದ ಆಧಾರದ ನೇಮಕಾತಿ ಸಲುವಾಗಿ ಅವಶ್ಯವಿರುವ ದಾಖಲೆಗಳ ವಿವರ ತೋರಿಸುವ ಚೆಕ್ ಲಿಸ್ಟ್ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.<br><br>ಮುಂದುವರೆದು, ಜಾತಿ ಪ್ರಮಾಣ ಪತ್ರ, ಕುಟುಂಬದ ಜೀವಂತ ಸದಸ್ಯರ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಮೃತರ ಕುಟುಂಬದಲ್ಲಿ ಸರ್ಕಾರಿ ನೌಕರಿಯಲ್ಲಿ ಇಲ್ಲದೇ ಇರುವ ಬಗ್ಗೆ ದೃಢಿಕರಣ ಪತ್ರ, ಮೃತ ನೌಕರರ ಪತ್ನಿ ಮರು ವಿವಾಹವಾಗದಿರುವ ದೃಢೀಕರಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರ್ / ಪಾಲಿಕೆ ಕಛೇರಿಗಳಿಂದ ಪಡೆದು ಒದಗಿಸಬೇಕಾಗಿರುತ್ತದೆ.<br><br>ಅರ್ಜಿದಾರರ ನಡತೆ ಮತ್ತು ಚಾರಿತ್ರಿಕ ವರದಿ ಕುರಿತು ದೃಢೀಕರಣ ಪತ್ರವನ್ನು ಸಂಬಂಧಪಟ್ಟ ಜಿಲ್ಲಾ ಪೊಲೀಸ್ ಅಧೀಕ್ಷಕರಿಂದ ಪಡೆಯಬೇಕಾಗಿರುತ್ತದೆ.<br><br>ಅರ್ಜಿದಾರರ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳ ನೈಜತೆ ಬಗ್ಗೆ ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಮಂಡಳಿ ಹಾಗೂ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಂದ ಪಡೆಯಬೇಕಾಗಿರುತ್ತದೆ.<br><br>ಅರ್ಜಿದಾರರ ಶಾರೀರಿಕ ಸುಸ್ಥಿತಿಯ ಬಗ್ಗೆ ವೈದ್ಯಕೀಯ ದೃಢೀಕರಣ ಪತ್ರವನ್ನು ಜಿಲ್ಲಾ ವೈದ್ಯಾಧಿಕಾರಿಗಳಿಂದ, ಕುಟುಂಬ ಪಿಂಚಣಿ ಮಂಜೂರಾತಿ ಪತ್ರವನ್ನು ಮಹಾಲೇಖಪಾಲರಿಂದ, ನಡತೆ ಪ್ರಮಾಣ ಪತ್ರವನ್ನು ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದು ಒದಗಿಸಬೇಕಾಗಿರುತ್ತದೆ.<br><br>ಸದರಿ ಎಲ್ಲಾ ಮೂಲ ದಾಖಲೆಗಳನ್ನು ಒಂದು ಬಾರಿ ಮಾತ್ರ ಒದಗಿಸಬೇಕಾಗಿರುತ್ತದೆ. |

| | | |
|---|---|---|
| ಆ | ಅನುಕಂಪದ ನೇಮಕಾತಿಗಾಗಿ ಬೇರೆ ಇಲಾಖೆಯಿಂದ ಅನುಮೋದನೆ ಆಗಿ ಬಂದಂತಹ ಪ್ರಸ್ತಾವನೆಯನ್ನು ಪ್ರಾದೇಶಿಕ ಆಯುಕ್ತರಿಗೆ ಸಲ್ಲಿಸಿದ ಪ್ರಸ್ತಾವನೆಗಳ ದಾಖಲೆಗಳನ್ನು ಪರಿಶೀಲಿಸಿ, ನಂತರ ಯಾವ ಮಾನದಂಡ / ಯಾವ ನಿಯಮಗಳ ಅಡಿಯಲ್ಲಿ ಷರತ್ತುಗಳನ್ನು ವಿಧಿಸಲಾಗುತ್ತದೆ; (ಸಂಪೂರ್ಣ ವಿವರ ನೀಡುವುದು) | ಅನುಕಂಪದ ನೇಮಕಾತಿಗಾಗಿ ಬೇರೆ ಇಲಾಖೆಯಿಂದ ಸ್ವೀಕೃತವಾದಂತಹ ಪ್ರಸ್ತಾವನೆಗಳ ದಾಖಲೆಗಳನ್ನು ಪರಿಶೀಲಿಸಿ, ನಂತರ ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ನಿಯಮ 6 ಮತ್ತು ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ಸೇವಾ (ದೌರ್ಜನ್ಯದಲ್ಲಿ ಮೃತಪಟ್ಟವರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ) (ವಿಶೇಷ) ನಿಯಮಗಳು 1999 ನಿಯಮ 4(3) ರಡಿ ಷರತ್ತುಗಳನ್ನು ಪೂರೈಸಿರಬೇಕಾಗಿರುತ್ತದೆ.<br><br>ಅಲ್ಲದೇ, ಅರ್ಜಿದಾರರು ಎಸ್.ಎಸ್.ಎಲ್.ಸಿ ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆ, ದ್ವಿತೀಯ ಭಾಷೆ ಅಥವಾ ಕನ್ನಡ ಮಾಧ್ಯಮದಿಂದ ಉತ್ತೀರ್ಣರಾಗಿರದೇ ಇದ್ದಲ್ಲಿ, ಕ.ನಾ.ಸೇ (ನೇಮಕಾತಿ)(ಕನ್ನಡ ಭಾಷೆ ಪರೀಕ್ಷೆ) ನಿಯಮಗಳು 1984ರನ್ವಯ ನೇಮಕಾತಿ ಪ್ರಾಧಿಕಾರಗಳು ಅಂತಹ ಅರ್ಜಿದಾರರಿಗೆ ನೇಮಕಾತಿ ಆದೇಶ ಹೊರಡಿಸುವ ಪೂರ್ವದಲ್ಲಿ ಅವರುಗಳಿಗೆ ಕನ್ನಡ ಭಾಷಾ ಪರೀಕ್ಷೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳುವ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ / 59 / ಸೇಅನೇ /2012, ದಿನಾಂಕ:06.08.2012ರ ಅನುಸಾರ ಅರ್ಜಿದಾರರು ಪರೀಕ್ಷಾರ್ಥ ಅವಧಿಯಲ್ಲಿ ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಷರತ್ತುಗಳನ್ನು ವಿಧಿಸಲಾಗುತ್ತದೆ. |
| ಇ | ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಒಂದು ಬಾರಿ ದಾಖಲೆಗಳನ್ನು ನೀಡಿದ ಮೇಲೆ (ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಇತರೆ ಇಲಾಖೆ ಒಂದು ವರ್ಷದ ಅವಧಿ ನಿಗದಿಪಡಿಸಿ ಪ್ರಮಾಣ ಪತ್ರಗಳನ್ನು ನೀಡಿರುತ್ತಾರೆ) ದಾಖಲೆಗಳನ್ನು ನೀಡಿದ್ದರು ಅವಧಿ ಮುಗಿದ ಪ್ರಮಾಣ ಪತ್ರಗಳ ದಾಖಲೆಗಳನ್ನು ಮತ್ತೆ ಒದಗಿಸಬೇಕೆಂದು ಯಾವ ಮಾನದಂಡ / ಕೆ.ಸಿ.ಎಸ್.ಆರ್ ನಿಯಮಾವಳಿಗಳ ಯಾವ ನಿಯಮಗಳ ಅಡಿಯಲ್ಲಿ ಸೂಚಿಸಲಾಗುತ್ತದೆ? (ಸಂಪೂರ್ಣ ವಿವರ ನೀಡುವುದು) | ಅನುಕಂಪದ ನೇಮಕಾತಿಯ ಬಗ್ಗೆ ಅಭ್ಯರ್ಥಿಯು ಸಲ್ಲಿಸಿರುವ ದಾಖಲೆಗಳು ಒಂದು ವರ್ಷದ ಅವಧಿಯಲ್ಲಿದ್ದು, ನಂತರದಲ್ಲಿ ಕಾರಣಾಂತರಗಳಿಂದ ನೇಮಕಾತಿಯು ವಿಳಂಬವಾಗಿದ್ದಲ್ಲಿ, ಆದಾಯ ಪ್ರಮಾಣ ಪತ್ರ ಅಥವಾ ಗುಣ ನಡತೆಯ ಬಗ್ಗೆ ಸಲ್ಲಿಸಿರುವ ದಾಖಲಾತಿಗಳಲ್ಲಿ ಯಾವುದಾದರೂ ಮರು ಪರಿಶೀಲನಾ ವರದಿಯ ಅವಶ್ಯಕತೆ ಇದ್ದಲ್ಲಿ ಮಾತ್ರ ಪುನಃ ಪಡೆಯಲಾಗುತ್ತದೆ.<br>ಈ ಸಂಬಂಧ ಯಾವುದೇ ನಿಯಮಗಳು ಇರುವುದಿಲ್ಲ. |

ಇ–ಕಂಇ 18 ಎಂಎಎಸ್ 2023

(ಆರ್.ಅಶೋಕ)
ಕಂದಾಯ ಸಚಿವರು

# ಅನುಕಂಪದ ಆಧಾರದ ಮೇಲೆ ನೇಮಕಾತಿ ಪ್ರಸ್ತಾವನೆಯ ದಾಖಲೆಗಳ ಪರಿಶೀಲನೆ ಚೆಕ್‌ಲಿಸ್ಟ್

<table>
<tr><td>1</td><td>ಅಭ್ಯರ್ಥಿಯ ಪೂರ್ಣ ಹೆಸರು ಮತ್ತು ವಿಳಾಸ</td><td></td></tr>
<tr><td>2</td><td>ದಿವಂಗತ ಸರ್ಕಾರಿ ನೌಕರನ ಹೆಸರು ಹಾಗೂ ಅವರು ನಿರ್ವಹಿಸಿದ ಹುದ್ದೆ</td><td></td></tr>
<tr><td>3</td><td>ನಮೂನೆ–1 ರಲ್ಲಿ ಅರ್ಜಿ (ನಿಯಮ 5 ರನ್ವಯ)</td><td></td></tr>
<tr><td>4</td><td>ನಮೂನೆ–2 ರಲ್ಲಿ ಇಲಾಖಾ ಮುಖ್ಯಸ್ಥರ ವರದಿ</td><td></td></tr>
<tr><td>5</td><td>ಸರ್ಕಾರಿ ನೌಕರನು ಮರಣ ಹೊಂದಿದ ದಿನಾಂಕ:</td><td></td></tr>
<tr><td>6</td><td>ಅಭ್ಯರ್ಥಿಯು ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ ದಿನಾಂಕ</td><td></td></tr>
<tr><td>7</td><td>ಅಭ್ಯರ್ಥಿಯ ಜನ್ಮ ದಿನಾಂಕ</td><td></td></tr>
<tr><td>8</td><td>ನೇಮಕಾತಿಗಾಗಿ ಅರ್ಜಿ ಸಲ್ಲಿಸಿದಾಗ ಅಭ್ಯರ್ಥಿಯ ವಯಸ್ಸು
<table>
<tr><td rowspan="2"></td><td colspan="3">ವಯೋಮಿತಿ</td></tr>
<tr><td>ಕನಿಷ್ಠ</td><td>ಗರಿಷ್ಠ</td><td>ವಿಧವೆಯರಿಗೆ ವಿನಾಯಿತಿ</td></tr>
<tr><td>ಸಾಮಾನ್ಯ</td><td>18 ವರ್ಷ</td><td>35 ವರ್ಷ</td><td>45 ವರ್ಷ</td></tr>
<tr><td>ಇತರೆ ಹಿಂದುಳಿದ ವರ್ಗಗಳು 2ಎ,2ಬಿ,3ಎ, 3ಬಿ</td><td>18 ವರ್ಷ</td><td>38 ವರ್ಷ</td><td>48 ವರ್ಷ</td></tr>
<tr><td>ಪರಿಶಿಷ್ಟ ಜಾತಿ/ ಪ.ಪಂ ಪ್ರವರ್ಗ–1, 2ಎ,2ಬಿ, 3ಎ, 3ಬಿ</td><td>18 ವರ್ಷ</td><td>40 ವರ್ಷ</td><td>50 ವರ್ಷ</td></tr>
</table>
ಸರ್ಕಾರದ ಅಧಿಸೂಚನೆ ಸಂ: ಸಿಆಸುಇ 26 ಸೇಅನೇ.2018 ದಿ: 9–4–2021 ರನ್ವಯ 55 ವರ್ಷ</td><td>
<table>
<tr><td>ವರ್ಷ</td><td></td></tr>
<tr><td>ತಿಂಗಳು</td><td></td></tr>
<tr><td>ದಿವಸ</td><td></td></tr>
</table>
ವಿಧವೆಯರಿಗೆ 10 ವರ್ಷ ರಿಯಾಯಿತಿ ಇದೆ
<table>
<tr><td>ವಯೋಮಿತಿ ಒಳಪಟ್ಟಿದೆಯೇ? ನಿಯಮ 4(2) ರನ್ವಯ</td><td></td></tr>
</table></td></tr>
<tr><td>9</td><td>ಅಭ್ಯರ್ಥಿಯು ಸರ್ಕಾರಿ ನೌಕರನು ಮರಣ ಹೊಂದಿದ ಒಂದು ವರ್ಷದಲ್ಲಿ ಅರ್ಜಿ ಸಲ್ಲಿಸಿರುವರೇ (ನಿಯಮ 5 ರನ್ವಯ)</td><td></td></tr>
<tr><td>10</td><td>ಅಭ್ಯರ್ಥಿಯು ಅಪ್ರಾಪ್ತ ವಯಸ್ಕನಿದ್ದಲ್ಲಿ ಸರ್ಕಾರಿ ನೌಕರನು ಮರಣ ಹೊಂದಿದ ಎರಡು ವರ್ಷದೊಳಗೆ 18 ವರ್ಷಗಳನ್ನು ಪೂರೈಸಿರತಕ್ಕದ್ದು ತದನಂತರ ಎರಡು ವರ್ಷದೊಳಗೆ ಅರ್ಜಿ ಸಲ್ಲಿಸಿರುವರೇ((ನಿಯಮ 5 ರನ್ವಯ)</td><td></td></tr>
</table>

| | | |
|---|---|---|
| 11 | ಎಸ್.ಎಸ್.ಎಲ್.ಸಿ/ಪಿ.ಯು.ಸಿ./ಪದವಿ ತೇರ್ಗಡೆ ಹೊಂದಿದ ವಿವರ | |
| 12 | ನೇಮಕಾತಿಗಾಗಿ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿ ವಿದ್ಯಾರ್ಹತೆ (ನಿಯಮ4(3) ರನ್ವಯ) | |
| 13 | ದಿವಂಗತ ನೌಕರರ ಮರಣ ದಾಖಲೆ | |
| 14 | 1)ಮೃತರ ಕುಟುಂಬದ ಜೀವಂತ ಸದಸ್ಯರ ದೃಡೀಕರಣ ಪತ್ರ<br>2)ಅಭ್ಯರ್ಥಿಗೆ ಮೃತ ಸರ್ಕಾರಿ ನೌಕರನ ಜೊತೆ ಇರುವ ಸಂಬಂಧ | |
| 15 | 1) ನೇಮಕಾತಿಗೆ ಅರ್ಜಿ ನೀಡಿರುವ ದಿನಾಂಕದಂದು ನಿಯಮಗಳನ್ವಯ(ಬೆಂಗಳೂರಿನ ಪ್ರ.ದ.ಸ ಹುದ್ದೆಗೆ ಅನ್ವಯಿಸುವಂತೆ ವಾರ್ಷಿಕ ವರಮಾನ ಲೆಕ್ಕಾಚಾರ) ವಾರ್ಷಿಕ ವರಮಾನ ಮಿತಿ (ನಿಯಮ 4(1)ರನ್ವಯ)<br>2) ಮೃತ ಸರ್ಕಾರಿ ನೌಕರನು ಕೊನೆಯದಾಗಿ ದಾಖಲು ಮಾಡಿದ ಅಂತಿಮ ಸ್ವತ್ತಿನ ಪಟ್ಟಿ ಇದೆಯೇ? ನಿಯಮ4 ಬಿ(1)ರನ್ವಯ<br>3) ಅಂತಿಮ ಸ್ವತ್ತಿನ ಪಟ್ಟಿಯಂತೆ ಮೃತರ ಕುಟುಂಬದ ವಾರ್ಷಿಕ ಆದಾಯ<br>4) ಅಭ್ಯರ್ಥಿಯ ಕುಟುಂಬದ ವಾರ್ಷಿಕ ವರಮಾನ (ತಹಶೀಲ್ದಾರರ ಪ್ರಮಾಣ ಪತ್ರ ಆಧಾರದಂತೆ–ನಿಯಮ 4ಬಿ(1)ರನ್ವಯ)<br>5) ವಾರ್ಷಿಕ ವರಮಾನ(ನಿಯಮ4(1)ರನ್ವಯ) ಮಿತಿಯೊಳಗಿರುತ್ತದೆಯೇ.<br>6) ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 26 ಸೇಅನೇ 2018 ದಿ: 09-04-2021ರ ತಿದ್ದುಪಡಿ ನಿಯಮಗಳಂತೆ ಮೃತ ನೌಕರರು ಗ್ರೂಪ್–ಸಿ ಹಾಗೂ ಡಿ ವೃಂದದ ನೌಕರರಾಗಿದ್ದಲ್ಲಿ ಆದಾಯದ ಮಿತಿ ಅನ್ವಯಿಸುವುದಿಲ್ಲ. | |
| 16 | ಅಭ್ಯರ್ಥಿಯ ನೇಮಕಾತಿ ಬಗ್ಗೆ ಯಾವುದೇ ಅಭ್ಯಂತರವಿಲ್ಲವೆಂದು ಕುಟುಂಬ ಸದಸ್ಯರು ಒಪ್ಪಿಗೆ ಪತ್ರ ನೀಡಿರುವರೇ(ನಿಯಮ3(2)ರನ್ವಯ) | |
| 17 | ಪೊಲೀಸ್ ವರದಿಯಂತೆ ಅಭ್ಯರ್ಥಿಯ ಮೇಲೆ ಕ್ರಿಮಿನಲ್ ಮೊಕ್ಕದಮೆ/ಗುನ್ಹಾ ದಾಖಲಾಗಿದೆಯೇ ಹೇಗೆ? ಎನ್ನುವ ಬಗ್ಗೆ ಪೊಲೀಸ್ ವರದಿ | |
| 18 | ಮೃತ ಸರ್ಕಾರಿ ನೌಕರನ ಕುಟುಂಬದ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ ನೌಕರಿ ಮಾಡುತ್ತಿದ್ದಾರೆಯೇ/ಮಾಡದೇ ಇದ್ದಲ್ಲಿ ಈ ಬಗ್ಗೆ ತಹಶೀಲ್ದಾರರ ಪ್ರಮಾಣ ಪತ್ರ | |

| | | |
|---|---|---|
| 19 | ಅಭ್ಯರ್ಥಿಯು ಉದ್ಯೋಗ ವಿನಿಮಯ ಕೇಂದ್ರದಲ್ಲಿ ತನ್ನ ಹೆಸರನ್ನು ದಾಖಲಿಸಿದ ಬಗ್ಗೆ ಉದ್ಯೋಗ ನೋಂದಣಿ ಪತ್ರ | |
| 20 | ಅಭ್ಯರ್ಥಿಯು ಮೃತ ಸರ್ಕಾರಿ ನೌಕರರ ವಿಧವೆ (ಹೆಂಡತಿ)ಯಾದಲ್ಲಿ ಮರು ಮದುವೆ ಆಗಿರುವುದಿಲ್ಲ ಎನ್ನುವ ಬಗ್ಗೆ ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರ (ನಿಯಮ 3(2)ರನ್ವಯ) | |
| 21 | ಅಭ್ಯರ್ಥಿಯು ಮೃತ ಸರ್ಕಾರಿ ನೌಕರರ ಅವಿವಾಹಿತ ಮಗಳಾಗಿದ್ದಲ್ಲಿ ಅಥವಾ ಸಹೋದರ/ಸಹೋದರಿ ಆಗಿದ್ದಲ್ಲಿ ಮದುವೆ ಆಗಿರುವುದಿಲ್ಲ ಎನ್ನುವ ಕುರಿತು ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರ (ನಿಯಮ3(2)ರನ್ವಯ) | |
| 22 | ಅರ್ಜಿದಾರರ ನಡತೆ ಬಗ್ಗೆ ಸ್ಥಳೀಯ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ | |
| 23 | ಮೃತ ಸರ್ಕಾರಿ ನೌಕರರ ಸೇವಾ ವಿವರ: ಜನ್ಮ ದಿನಾಂಕ<br>ಸೇವೆಗೆ ಸೇರಿದ ದಿನಾಂಕ<br>ಮರಣ ದಿನಾಂಕ<br>ನಿವೃತ್ತಿಯಾಗಬೇಕಾಗಿದ್ದ ದಿನಾಂಕ | |
| 24 | 1)ಮೃತ ಸರ್ಕಾರಿ ನೌಕರರ ಮೂಲ ಸೇವಾ ಪುಸ್ತಕ<br>2) ಸೇವಾ ಪುಸ್ತಕದಲ್ಲಿ ದಿವಂಗತ ನೌಕರರ ಮೃತವಾದ ದಿನಾಂಕವನ್ನು ದಾಖಲಿಸಿದ್ದಾರೆಯೇ?<br>3)ಮರಣ ದಾಖಲೆ ದಿನಾಂಕಕ್ಕೂ ಹಾಗೂ ಸೇವಾ ಪುಸ್ತಕದಲ್ಲಿ ದಾಖಲಿಸಿದ ದಿನಾಂಕಕ್ಕೆ ಯಾವುದೇ ವ್ಯತ್ಯಾಸವಿದೆಯೇ.<br>4) ಮಹಾಲೇಖಪಾಲರಿಂದ ಮೃತ ಸರ್ಕಾರಿ ನೌಕರನ ಅವಲಂಬಿತರಿಗೆ ಕುಟುಂಬ ಪಿಂಚಣಿ ಮಂಜೂರಾಗಿದೆಯೇ.<br>5)ಮಹಾಲೇಖಪಾಲರಿಂದ ಕುಟುಂಬ ಪಿಂಚಣಿ ಮಂಜೂರಾದ ಬಗ್ಗೆ ಸೇವಾ ಪುಸ್ತಕದಲ್ಲಿ ದಾಖಲಿಸಿದ್ದಾರೆಯೇ<br>6) ಮಹಾಲೇಖಪಾಲರಿಂದ ಕುಟುಂಬ ಪಿಂಚಣಿ ಮಂಜೂರಾದಲ್ಲಿ ಆದೇಶದ ಪ್ರತಿ | |
| 25 | ಎಸ್.ಎಸ್.ಎಲ್.ಸಿ ಹಾಗೂ ಉನ್ನತ ಪರೀಕ್ಷೆಗಳಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆ/ದ್ವಿತೀಯ ಭಾಷೆ ಅಥವಾ ಶಿಕ್ಷಣ ಮಾಧ್ಯಮ ಕನ್ನಡ ತೆಗೆದುಕೊಂಡು ತೇರ್ಗಡೆ ಹೊಂದಿದ ವಿವರ | |

| | | |
|---|---|---|
| 26 | ಕರ್ನಾಟಕ ನಾಗರೀಕ ಸೇವಾ (ನೇಮಕಾತಿ) (ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1984 ರನ್ವಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಹೊಂದಿರುವರೇ(ನಿಯಮ6(6) ರನ್ವಯ) | |
| 27 | ಮೃತ ನೌಕರರ ಸೇವೆಯು ದಿನಗೂಲಿಯಂದ ಸಕ್ರಮಗೊಂಡಿದ್ದಲ್ಲಿ ಮೂಲ ದಾಖಲೆ/ಕಡತ ಅಥವಾ ಸರ್ಕಾರದಿಂದ ನಿಗದಿಪಡಿಸಿರುವ ನಮೂನೆಯಲ್ಲಿ ವರದಿ (ನಿಯಮ 6(5) ರನ್ವಯ) | |
| 28 | ಹೆಸರಿನ ವ್ಯತ್ಯಾಸದ ಬಗ್ಗೆ ವಿವರಣೆಯನ್ನು ಅಫೀಡವೀಟ್/ಹೇಳಿಕೆಯೊಂದಿಗೆ ಸಲ್ಲಿಸುವುದು. | |
| 29 | ಮೂಲ ವರ್ಗಾವಣೆ ಪ್ರಮಾಣ ಪತ್ರ | |
| 30 | ಜಾತಿ ಪ್ರಮಾಣ ಪತ್ರ | |
| 31 | ವಾಸ ಸ್ಥಳ ಪ್ರಮಾಣ ಪತ್ರ | |
| 32 | ಅರ್ಜಿದಾರರ ದೃಢೀಕೃತ ಭಾವಚಿತ್ರ/ ಮಾದರಿ ಸಹಿ | |
| 33 | ಶಾರೀರಿಕ ಸುಸ್ಥಿತಿ ಪ್ರಮಾಣ ಪತ್ರ | |
| 34 | ದಿವಂಗತ ಕುಟುಂಬ ಜಮೀನಿನ ವಾರ್ಷಿಕ ಆದಾಯದ ವರದಿ ತಹಶೀಲ್ದಾರರವರಿಂದ | |
| 35 | ಮೇಲಿನ ಅಂಶಗಳ ಆಧಾರದಂತೆ ಅಭ್ಯರ್ಥಿಯು ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರಿರುವರೇ | |

## ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ 1999ರ ಅನ್ವಯ ಮೃತಪಟ್ಟ ಅವಲಂಭಿತರಿಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ನೀಡುವ ಬಗ್ಗೆ ದಾಖಲಾತಿಗಳ ಚೆಕ್‌ಲಿಸ್ಟ್

Date of death:
Date of birth:

Date of application:
Date of death :

Date of application:
Date of birth :

| ಕ್ರ. ಸಂ. | ದಾಖಲಾತಿಗಳ ವಿವರ | ದಾಖಲಾತಿಗಳು ಇದೇಯೇ/ ಇಲ್ಲವೇ | ಪುಟ ಸಂಖ್ಯೆ |
|---|---|---|---|
| 1 | ಮೃತಪಟ್ಟ ವ್ಯಕ್ತಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ 1999ರ ಅನ್ವಯ ದೌರ್ಜನ್ಯಕ್ಕೊಳಗಾಗಿ ಮೃತಪಟ್ಟಿರುವ ಬಗ್ಗೆ ದಾಖಲಾತಿಯೊಂದಿಗೆ ವಿವರ | | |
| 2 | ದೌರ್ಜನ್ಯ ಕಾಯಿದೆಯಡಿ ನೌಕರಿ ಕೋರಿ ಅರ್ಜಿದಾರನು ಮೃತಪಟ್ಟ ವ್ಯಕ್ತಿಗೆ ಹೊಂದಿರುವ ಸಂಬಂಧ | | |
| 3 | ನಿಗದಿತ ನಮೂನೆ-ಎ ರಲ್ಲಿ ಅರ್ಜಿ ಸಲ್ಲಿಸಿದ್ದಾರೆಯೇ? | | |
| 4 | ನಿಗದಿತ ನಮೂನೆ ಬಿ ಮತ್ತು ಡಿ ರಲ್ಲಿ ಜಿಲ್ಲಾಧಿಕಾರಿಗಳ ವರದಿ | | |
| 5 | ದೌರ್ಜನ್ಯದಲ್ಲಿ ಮರಣ ಹೊಂದಿದ I ವರ್ಷದೊಳಗೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿದ್ದಾರೆಯೇ? | | |
| 6 | ಮೃತರ ಪ್ರಥಮ ವರ್ತಮಾನ ವರದಿ (FIR) ಹಾಗೂ ದೋಷಾರೋಪಣಾ ಪಟ್ಟಿ (Charge Sheet) ಮೂಲ ಅಥವಾ ದೃಢೀಕೃತ ನಕಲು | | |
| 7 | ನೇಮಕಾತಿಗಾಗಿ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯ ವಿದ್ಯಾರ್ಹತೆ | | |
| 8 | ಅಭ್ಯರ್ಥಿಯ ಜಾತಿ ಪ್ರಮಾಣ ಪತ್ರ | | |
| 9 | ಮೃತರ ಕುಟುಂಬಕ್ಕೆ ಪರಿಹಾರ ಧನ ಪಾವತಿಸಿರುವ ಬಗ್ಗೆ ಆದೇಶದ ಮೂಲ ಅಥವಾ ದೃಢೀಕೃತ ಪ್ರತಿ | | |
| 10 | ವಾರ್ಷಿಕ ವರಮಾನ ಮಿತಿಯೊಳಗೆ ಒಳಪಟ್ಟಿದೆಯೇ ಎಂಬ ಬಗ್ಗೆ ಜಿಲ್ಲಾಧಿಕಾರಿಗಳ ದೃಢೀಕರಣ ಪತ್ರ | | |
| 11 | ಮೃತಪಟ್ಟ ವ್ಯಕ್ತಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ದೌರ್ಜನ್ಯದಿಂದ ಮೃತಪಟ್ಟಿರುವ ಬಗ್ಗೆ ಜಿಲ್ಲಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರ. | | |
| 12 | ಅರ್ಜಿದಾರರು ಹೊಂದಿರುವ ವಿದ್ಯಾರ್ಹತೆಯ ಬಗ್ಗೆ ಪ್ರಮಾಣ ಪತ್ರ | | |
| 13 | ಸಂಬಂಧಪಟ್ಟ ಪೊಲೀಸ್ ಅಧೀಕ್ಷಕರಿಂದ ಪಡೆದು ಸಲ್ಲಿಸಿರುವ ಅಭ್ಯರ್ಥಿಯ ಚಾರಿತ್ರಿಕ ವರದಿ | | |

| | | | |
|---|---|---|---|
| 14 | ದಿವಂಗತರ ಪತ್ನಿ ಸರ್ಕಾರಿ ಸೇವೆಯಲ್ಲಿರುವುದಿಲ್ಲ ಎಂಬ ಬಗ್ಗೆ ಮತ್ತು ಕುಟುಂಬ ಸದಸ್ಯರುಗಳಲ್ಲಿ ಯಾರಿಗೂ ಅನುಕಂಪದ ಆಧಾರದ ಮೇಲೆ ನೌಕರಿ ದೊರೆತಿಲ್ಲ ಎಂಬ ಬಗ್ಗೆ ಹಾಗೂ ಕುಟುಂಬ ಸದಸ್ಯರುಗಳಲ್ಲಿ ಯಾರೂ ಸರ್ಕಾರಿ ಸೇವೆಯಲ್ಲಿರುವುದಿಲ್ಲ ಎಂಬ ಬಗ್ಗೆ ದಿವಂಗತರ ಪತ್ನಿ ನೋಟರಿಯವರಿಂದ ಪಡೆದು ಸಲ್ಲಿಸಿರುವ ಪ್ರಮಾಣ ಪತ್ರ. | | |
| 15 | ದಿವಂಗತರ ಪತ್ನಿ ಸರ್ಕಾರಿ ಸೇವೆಯಲ್ಲಿರುವುದಿಲ್ಲ ಎಂಬ ಬಗ್ಗೆ ಮತ್ತು ಕುಟುಂಬ ಸದಸ್ಯರುಗಳಲ್ಲಿ ಯಾರೂ ಸರ್ಕಾರಿ ನೌಕರಿಯಲ್ಲಿರುವುದಿಲ್ಲ ಎಂಬ ಬಗ್ಗೆ ದಿವಂಗತರ ಪತ್ನಿ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದು ಸಲ್ಲಿಸಿರುವ ದೃಢೀಕರಣ ಪತ್ರ | | |
| 16 | ನಿಯಮ 3 ಉಪನಿಯಮ 2(ಸಿ) ರಂತೆ ಅರ್ಜಿದಾರರ ಜನನ ದೃಢೀಕರಣ ಪತ್ರ. | | |
| 17 | ಅರ್ಜಿದಾರರಿಗೆ ಅನುಕಂಪ ಆಧಾರ ನೌಕರಿ ನೀಡಲು ನೋಟರಿರವರಿಂದ ಪಡೆದು ಸಲ್ಲಿಸಿರುವ ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆ ಪ್ರಮಾಣ ಪತ್ರ. | | |
| 18 | ಮೃತರ ಪತ್ನಿ ಮರುವಿವಾಹವಾಗಿರುವುದಿಲ್ಲ ಎಂಬ ಬಗ್ಗೆ ತಹಶೀಲ್ದಾರ್‌ರವರಿಂದ ದೃಢೀಕರಣ ಪತ್ರ. | | |
| 19 | ಮೃತರ ಪತ್ನಿ ಮರುವಿವಾಹವಾಗಿರುವುದಿಲ್ಲ ಎಂಬ ಬಗ್ಗೆ ನೋಟರಿಯವರಿಂದ ಪ್ರಮಾಣ ಪತ್ರ. | | |
| 20 | ಅರ್ಜಿದಾರರು ಮೃತ ವ್ಯಕ್ತಿಯ ಮೇಲೆ ಅವಲಂಬಿತರೇ ಎಂಬ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಕುಟುಂಬ ಸದಸ್ಯರ ದೃಢೀಕರಣ ಪತ್ರ | | |
| 21 | ನಿಯಮ 3 ಉಪನಿಯಮ 2(ಇ) ರಂತೆ ಮರಣ ದೃಢೀಕರಣ ಪತ್ರ. | | |
| 22 | ನಿಯಮ 3 ಉಪನಿಯಮ 2(ಎಫ್) ರಂತೆ ಅರ್ಜಿದಾರನಿಗೆ ಬೇರೆ ಯಾವುದೇ ಮೂಲಗಳಿಂದ ಆದಾಯ ಇರುವುದಿಲ್ಲವೆಂಬ ಬಗ್ಗೆ ನೋಟರಿಯವರಿಂದ ಪ್ರಮಾಣ ಪತ್ರ. | | |
| 23 | ಅನುಕಂಪದ ಆಧಾರದ ಮೇಲೆ ಅರ್ಜಿದಾರರು ನೇಮಕಾತಿ ಹೊಂದುವ ಬಗ್ಗೆ ಅರ್ಹರಿದ್ದಾರೆ ಎಂಬ ಬಗ್ಗೆ ಜಿಲ್ಲಾಧಿಕಾರಿಗಳ ಶಿಫಾರಸ್ಸು. | | |
| 24 | ಇಬ್ಬರು ಸ್ಥಳೀಯ ವ್ಯಕ್ತಿಗಳಿಂದ ಅರ್ಜಿದಾರರ ನಡತೆ ಪ್ರಮಾಣ ಪತ್ರ | | |
| 25 | ಅರ್ಜಿದಾರರ ಮೂರು ದೃಢೀಕೃತ ಭಾವಚಿತ್ರ. | | |
| 26 | ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದು ಸಲ್ಲಿಸಿರವ ಆದಾಯ ದೃಢೀಕರಣ ಪತ್ರ. | | |